# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ 2012–13ನೇ ಸಾಲಿಗೆ **ಸೌರ ಬೆಳಕು ಯೋಜನೆಯಡಿ** ಅನುದಾನ ಬಿಡುಗಡೆ ಕುರಿತು

ಓದಲಾಗಿದೆ ಸರ್ಕಾರದ ಪತ್ರ ಸಂಖ್ಯೆ: 16 ಜೈಅಯೋ 2012 ದಿನಾಂಕ 07.07.2012

2012–13ನೇ ಸಾಲಿನಲ್ಲಿ **ಸೌರ ಬೆಳಕು ಯೋಜನೆಗೆ** ರಾಜ್ಯ ₹ 310.00 ಲಕ್ಷಗಳನ್ನು ನಿಗದಿ ಪಡಿಸಲಾಗಿದ್ದು, ಓದಲಾದ ಪತ್ರದಲ್ಲಿ ಸೌರಬೆಳಕು ಯೋಜನೆಯಡಿ ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್ ಜಿಲ್ಲಾ ಪಂಚಾಯತ್‌ಗಳನ್ನು ಪ್ರಾಯೋಗಿಕ ಜಿಲ್ಲೆಗಳನ್ನಾಗಿ ಆಯ್ಕೆ ಮಾಡಿ, ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ನಿಗದಿ ಪಡಿಸಲಾಗಿರುತ್ತದೆ. ಇದರನ್ವಯ ಕಾರ್ಯಕ್ರಮದ ಅನುಷ್ಠಾನದ ಪ್ರಾಥಮಿಕ ಚಟುವಟಿಕೆಗಳಿಗಾಗಿ ಆಯವ್ಯಯದಡಿ ನಿಗದಿ ಪಡಿಸಲಾದ ಅನುದಾನದ ಪೈಕಿ ಶೇ.25 ರಷ್ಟು ಅನುದಾನವನ್ನು ಅಂದರೆ ರೂ.75.00 ಲಕ್ಷಗಳನ್ನು ಪ್ರಾಯೋಗಿಕ ಜಿಲ್ಲೆಗಳಿಗೆ ಲೆಕ್ಕ ಶೀರ್ಷಿಕೆ 2810–01–198–1–01 (2810–00–101–0–91) (Lumpsum) ರಡಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 33 ಜೈಅಯೋ 2012, ಬೆಂಗಳೂರು, ದಿನಾಂಕ 14.09.2012.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 2011–12ನೇ ಸಾಲಿನಲ್ಲಿ ಸೌರಬೆಳಕು ಯೋಜನೆಯ ಅನುಷ್ಠಾನಕ್ಕಾಗಿ ₹ 75.00 ಲಕ್ಷಗಳನ್ನು ( ರೂ. ಎಪ್ಪತ್ತೈದು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 2810–01–198–1–01(2810–00–101–0–91) (Lumpsum) ರಡಿ ಈ ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ತುಮಕೂರು | 12.50 |
| 2 | ಚಿಕ್ಕಮಗಳೂರು | 12.50 |
| 3 | ಗದಗ | 12.50 |
| 4 | ಧಾರವಾಡ | 12.50 |
| 5 | ಗುಲಬರ್ಗಾ | 12.50 |
| 6 | ಬೀದರ್ | 12.50 |
| | **ಒಟ್ಟು** | **75.00** |

ಬಿಡುಗಡೆ ಮಾಡಲಾದ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕತಪಾಸಣೆಗೊಳಪಟ್ಟಿರುತ್ತದೆ. ಸದರಿ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು.

ಸದರಿ ಅನುದಾನವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 69 ಪಿಬಿಎಸ್ 2012 ದಿನಾಂಕ 11.09.2012 ರಲ್ಲಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ.ದೀಪಾ)
ನಿರ್ದೇಶಕರು(ಗ್ರಾಮೂಸಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್
3. ಉಪಕಾರ್ಯದರ್ಶಿ(ಅಭಿವೃದ್ಧಿ)/ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
5. ಜಿಲ್ಲಾ ಖಜಾನಾಧಿಕಾರಿಗಳು, ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್
6. ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
7. ಖಜಾನೆಗಳ ಉಪನಿರ್ದೇಶಕರು, ಫೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು
8. ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ:49, ಸೆಕೆಂಡ್ ಬ್ಲಾಕ್, ಸೆಕೆಂಡ್ ಪ್ಲೋರ್, ಖನಿಜಭವನ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
10. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ